ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ
ದಿನಾಂಕ : DATE : 30/06/2017

## ಈ ಬಾರಿಯ ವಿಧಾನ ಮಂಡಲ ಅಧಿವೇಶನ ವೆಬ್ ಕಾಸ್ಟಿಂಗ್

# ಕಾಗದ ರಹಿತ ಕಲಾಪಕ್ಕೆ ರಾಜ್ಯ ಸಿದ್ಧತೆ

**■ ರಾಘವೇಂದ್ರ ಭಟ್** ಬೆಂಗಳೂರು

ಕಾಗದ ರಹಿತ ಕಲಾಪ ಪದ್ಧತಿಗಾಗಿ ಕೇಂದ್ರ ಸರಕಾರ ಜಾರಿಗೆ ತಂದಿರುವ 'ಇ-ವಿಧಾನ್' ಅನುಷ್ಠಾನದಲ್ಲಿ ಕುಂಟುತ್ತಾ ಸಾಗುತ್ತಿದ್ದ ಕರ್ನಾಟಕ ವಿಧಾನಸಭೆ ಸಚಿವಾಲಯ ತುಸು ಸುಧಾರಿಸಿದ್ದು, ಈ ಬಾರಿಯ ಕಲಾಪವನ್ನು 'ವೆಬ್ ಕಾಸ್ಟಿಂಗ್' ಮಾಡಲು ಸಿದ್ಧತೆ ನಡೆಸಿದೆ.

ಕಳೆದ ಬಜೆಟ್ ಅಧಿವೇಶನ ಸಂದರ್ಭದಲ್ಲಿ ಪ್ರಾಯೋಗಿಕವಾಗಿ ಯತ್ನ ಯಶಸ್ವಿಯಾದ ಹಿನ್ನೆಲೆಯಲ್ಲಿ ಈ ಬಾರಿಯ ಕಲಾಪವನ್ನು ಸಂಪೂರ್ಣವಾಗಿ ವೆಬ್ ಕಾಸ್ಟಿಂಗ್ ನಡೆಸಲು ನಿರ್ಧರಿಸಲಾಗಿದೆ. ಅದೇ ರೀತಿ ವಿಧಾನ ಮಂಡಲದ ಕೆಲ ಮಾಹಿತಿಗಳನ್ನು 'ನೇವಾ' (ನ್ಯಾಷನಲ್ ಇ ವಿಧಾನ್ ಆ್ಯಪ್)ಗೆ ಅಪ್‌ಲೋಡ್ ಮಾಡಿ ಪೇಪರ್‌ಲೆಸ್ ಕಲಾಪ ಪದ್ಧತಿಯಲ್ಲಿ ಅಳವಡಿಕೆಗೆ ಸಿದ್ಧತೆ ನಡೆಸಿದೆ. ಎನ್‌ಐಸಿ ಅಭಿವೃದ್ಧಿಪಡಿಸಿರುವ ಸಾಫ್ಟ್‌ವೇರ್ ವಿಕಸದನ ವ್ಯವಸ್ಥೆ ಇರುವ ರಾಜ್ಯಗಳಿಗೆ ಅನುಕೂಲಕರವಾಗಿದೆ. ಆದರೆ ವಿಧಾನ ಸಭೆ ಹಾಗೂ ವಿಧಾನ ಪರಿಷತ್ ಹೊಂದಿರುವ ರಾಜ್ಯಗಳಿಗೆ ಇದರಿಂದ ತಾಂತ್ರಿಕ ಅಡಚಣೆಗಳಾಗುತ್ತಿರುವುದರಿಂದ ಕೆಲ ಆಧುನೀಕರಣ ಅನಿವಾರ್ಯವಾಗಿದೆ. ಹೀಗಾಗಿ ರಾಜ್ಯದಲ್ಲಿ ಇ-ವಿಧಾನ್ ಜಾರಿಯಲ್ಲಿ ವಿಳಂಬವಾಗುತ್ತಿದ್ದು, ಮುಂದಿನ ಎರಡು ವರ್ಷಗಳಲ್ಲಿ ಸಂಪೂರ್ಣ ಅನುಷ್ಠಾನವಾಗುವ ನಿರೀಕ್ಷೆ ಇದೆ.

**ಅನಂತ್ ಕೊಡುಗೆ:** ದಿ. ಅನಂತಕುಮಾರ್ ಕೇಂದ್ರ ಸಂಸದೀಯ ವ್ಯವಹಾರ ಸಚಿವರಾಗಿದ್ದ ಸಂದರ್ಭದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಮಹತ್ವಾಕಾಂಕ್ಷೆಯ ಡಿಜಿಟಲ್ ಇಂಡಿಯಾದ ಭಾಗವಾಗಿ ದೇಶದ ಎಲ್ಲ ರಾಜ್ಯಗಳ ಶಾಸನಸಭೆ ಕಲಾಪವನ್ನು ಕಾಗದ ರಹಿತಗೊಳಿಸುವ ಉದ್ದೇಶದಿಂದ ಈ ಯೋಜನೆ ಆರಂಭಿಸಿದ್ದರು. ಈಶಾನ್ಯ ಭಾರತದ ರಾಜ್ಯಗಳಿಗೆ 90:10, ಕೇಂದ್ರಾಡಳಿತ ಪ್ರದೇಶಗಳಲ್ಲಿ ಶೇ.100 ಹಾಗೂ ಉಳಿದ ಕಡೆ ಕೇಂದ್ರ ಹಾಗೂ ರಾಜ್ಯದ ಅನುಷ್ಠಾನ ವೆಚ್ಚವನ್ನು 60:40 ಪ್ರಮಾಣದಲ್ಲಿ ನಿಗದಿ ಮಾಡಲಾಗಿತ್ತು. ಯೋಜನೆ ಜಾರಿಯಾದ ನಂತರದ ಮೂರು ವರ್ಷ ಕಾಲ ಆಯಾ ರಾಜ್ಯ ಸರಕಾರಗಳೇ ನಿರ್ವಹಣಾ ವೆಚ್ಚ ಭರಿಸಬೇಕೆಂಬ ನಿಬಂಧನೆಯೊಂದಿಗೆ ಇ-ವಿಧಾನ್ ಜಾರಿಯಾಗಿದೆ. ಹಿಮಾಚಲ ಪ್ರದೇಶ ದೇಶದ ಪ್ರಥಮ ಡಿಜಿಟಲ್ ಶಾಸನಸಭೆಯಾಗಿ ಈಗಾಗಲೇ ರೂಪುಗೊಂಡಿದೆ. ಆದರೆ ರಾಜ್ಯ ವಿಧಾನ ಮಂಡಲ ಐಟಿಸಿಟಿ ಬೆಂಗಳೂರಿನಲ್ಲೇ ಇದ್ದರೂ ಕಾಗದ ರಹಿತ ಕಲಾಪದಲ್ಲಿ ಹಿಂದೆ ಬಿದ್ದಿದೆ ಎಂಬ ಟೀಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಈಗ ಪ್ರಕ್ರಿಯೆ ಚುರುಕುಗೊಂಡಿದೆ. ಪಂಜಾಬ್, ಬಿಹಾರ, ತೆಲಂಗಾಣ,ಸಿಕ್ಕಿಂ, ಮಣಿಪುರ, ಅರುಣಾಚಲ ಪ್ರದೇಶ, ಗುಜರಾತ್, ಪಶ್ಚಿಮ ಬಂಗಾಳ, ಕೇರಳ ರಾಜ್ಯಗಳಲ್ಲಿ ಯೋಜನೆ ತ್ವರಿತಗತಿಯಲ್ಲಿ ಜಾರಿಯಾಗುತ್ತಿದೆ.

**ತಾಂತ್ರಿಕ ಸಮಸ್ಯೆ:** ವಿಧಾನಸಭೆ ಸದಸ್ಯರ ಹೆಸರು, ಕ್ಷೇತ್ರಗಳ ಜತೆಗೆ ವಿಧಾನ ಪರಿಷತ್ ಸದಸ್ಯರ ಮಾಹಿತಿಯನ್ನೂ ಆ್ಯಪ್‌ಗೆ ಅಪ್‌ಲೋಡ್ ಮಾಡಬೇಕು. ಜತೆಗೆ ವಿಧಾನ ಪರಿಷತ್‌ನಿಂದ ಸಚಿವರಾದವರು ವಿಧಾನಸಭೆಯಲ್ಲಿ ನೀಡಿದ ಉತ್ತರಗಳನ್ನು ಈಗಿನ ಸಾಫ್ಟ್‌ವೇರ್ ಮೂಲಕ ಅಪ್‌ಲೋಡ್ ಮಾಡಲು ಸಾಧ್ಯವಾಗುತ್ತಿಲ್ಲ. ಪರಿಷತ್ ಕಲಾಪಗಳಿಗೆ ಪ್ರತ್ಯೇಕ ಗ್ಯಾಲರಿ ಅಗತ್ಯವಿದೆ. ಇಂಥ ತಾಂತ್ರಿಕ ಸಮಸ್ಯೆಗಳಿಂದ ಜಾರಿ ವಿಳಂಬವಾಗಿದೆ ಎಂದು ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು 'ವಿಜಯ ಕರ್ನಾಟಕ'ಕ್ಕೆ ತಿಳಿಸಿದ್ದಾರೆ. ಆದಾಗಿಯೂ ಪ್ರಶ್ನೋತ್ತರ ಕಲಾಪದ ಕೆಲ ಮಾಹಿತಿಗಳನ್ನು ಈಗಾಗಲೇ ಅಪ್‌ಲೋಡ್ ಮಾಡಲಾಗಿದೆ. ಈ ಬಾರಿ ಸಂಸತ್ ಮಾದರಿಯಲ್ಲಿ ವೆಬ್‌ಕಾಸ್ಟಿಂಗ್ ನಡೆಸಲಾಗುತ್ತಿದ್ದು ಶಾಸಕರು, ಅಧಿಕಾರಿಗಳನ್ನು ಹಂತಹಂತವಾಗಿ ಪೇಪರ್‌ಲೆಸ್ ಕಲಾಪ ವ್ಯವಸ್ಥೆಗೆ ಹೊಂದಿಕೊಳ್ಳುವಂತೆ ಮಾಡಲಾಗುತ್ತದೆ ಎಂದು ವಿವರಿಸಿದರು.



### ಕೈ ಎತ್ತಿದ ಕೇಂದ್ರ

ಯೋಜನೆಗೆ ಅಗತ್ಯವಾದ ಹಣಕಾಸು ನೆರವು ನೀಡಲು ಕೇಂದ್ರ ಸರಕಾರ ಹಿಂದೇಟು ಹಾಕುತ್ತಿದೆ. ಈ ಹಿಂದೆ 60 : 40 ಅನುಪಾತದಲ್ಲಿ ವೆಚ್ಚ ಭರಿಸಲಾಗುವುದು ಎಂದು ಕೇಂದ್ರ ಸರಕಾರ ಎಲ್ಲ ರಾಜ್ಯಗಳಿಗೆ ಭರವಸೆ ನೀಡಿತ್ತು. ಬಳಿಕ 40:60ಕ್ಕೆ ಇಳಿಕೆ ಮಾಡಲಾಗಿತ್ತು. ಈಗ ತಾಂತ್ರಿಕ ಸಹಾಯವನ್ನು ಮಾತ್ರ ನೀಡಲಾಗುವುದು ಎಂದು ಕೇಂದ್ರ ಸಂಸದೀಯ ವ್ಯವಹಾರ ಇಲಾಖೆ ಅಧಿಕಾರಿಗಳು ರಾಜ್ಯ ಸರಕಾರಗಳನ್ನು ಸತಾಯಿಸಲಾರಂಭಿಸಿದ್ದಾರೆ. ಹೀಗಾಗಿ ರಾಜ್ಯದವರೇ ಆದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ ಗಮನಕ್ಕೆ ಈ ವಿಚಾರ ತರಲು ಸ್ಪೀಕರ್ ರಮೇಶ್ ಕುಮಾರ್ ಚಿಂತನೆ ನಡೆಸಿದ್ದಾರೆ ಎಂದು ತಿಳಿದು ಬಂದಿದೆ.

### ಯೋಜನೆ ಉದ್ದೇಶ

- ಕಾಗದ ರಹಿತ ಕಲಾಪ
- ದೇಶದ ಎಲ್ಲ ರಾಜ್ಯಗಳ ಶಾಸಕರನ್ನು ಒಂದೇ ವೇದಿಕೆ (ಆ್ಯಪ್ )ಗೆ ತರುವುದು.
- ಶಾಸನ ಸಭೆಗಳ ಬೃಹತ್ ದಾಖಲೆ ಸಂಗ್ರಹ.
- ಮಾಹಿತಿ ವಿನಿಮಯ
- ಮಲ್ಟಿಪಲ್ ಆ್ಯಪ್ ಬಳಕೆ ತಪ್ಪಿಸುವುದು.
- ವಿಧೇಯಕ, ವರದಿ, ಪ್ರಶ್ನೋತ್ತರ ಸೇರಿದಂತೆ ಅಪಾರ ಪ್ರಮಾಣದ ಕಾಗದ ನಷ್ಟ ತಡೆಯುವುದು.
- ಕಲಾಪಗಳ ಆರ್ಥಿಕ ವೆಚ್ಚಕ್ಕೆ ಕಡಿವಾಣ.